# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-3263/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 08/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಮತ್ತು (2) ಶ್ರೀ ಸುರೇಶ್ ಸೇರ್ವೆಗಾರ್, ಮಾಜಿ ಅಧ್ಯಕ್ಷರು, ಹಾಲಿ ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರುಗಳು ಸಾರ್ವಜನಿಕ ನೌಕರರು/ಚುನಾಯಿತ ಪ್ರತಿನಿಧಿಗಳಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*-*-*

ಪ್ರಕರಣದ ದೂರುದಾರರಾದ ಶ್ರೀ ಶೇಖರ್ ಕಲ್ಪಂಡೆ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಎದುರುದಾರರುಗಳು ರಾಜೀಯ ಮುಂದಾಳಾದ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಹಾಗೂ ಅವರ ಪತ್ನಿ ಶ್ರೀಮತಿ ಸರಿತಾ ಹೆಗ್ಗಡೆ ಅವರಿಗೆ ಅನುಕೂಲವಾಗುವಂತೆ ಅಂದಿನ ಕಾರ್ಯದರ್ಶಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಅವರುಗಳ ಶಿಫಾರಸ್ಸಿನ ಮೇಲೆ ಗ್ರಾಮ ಸಭೆಯ ಸಾಮಾನ್ಯ ಸಭೆಯ ನಿರ್ಣಯವನ್ನು ತೆಗೆದುಕೊಂಡು ಪಿಂಕಿ ವೈನ್ಸ್ ಎಂಬ ಮಧ್ಯ ಮರಾಟ ಅಂಗಡಿಯನ್ನು ತೆರೆಯಲು ಉದ್ದಿಮೆ ಪರವಾನಗಿಯನ್ನು ನೀಡಿರುತ್ತಾರೆ. ಸದರಿ ಉದ್ದಿಮೆ ತೆರಯುವ ಹಂತದಲ್ಲಿ ಉದ್ದಿಮೆ ಪ್ರಾರಂಭಿಸಬೇಕಾದ ಜಾಗವು/ನಿವೇಶನವು ಪರಿವರ್ತಿತ ಜಮೀನು ಆಗದಿದ್ದರೂ ಸಹ, ಪರಿವರ್ತನೆಯಾಗಿದೆ ಎಂದು ತೋರಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪಂಚಾಯತಿಗೆ ಪಡೆದು ಉದ್ದಿಮೆ ಪರವಾನಗಿಯನ್ನು ನೀಡಿರುತ್ತಾರೆ. ಇದಲ್ಲದೇ, 2ನೇ ಎದುರುದಾರರು ಕಟ್ಟಡ ತೆರಿಗೆಯನ್ನು ಪಾವತಿಸಿಕೊಂಡಿರುತ್ತಾರೆ. ಈ ಅಕ್ರಮದ ಬಗ್ಗೆ ಪೆರ್ಡೂರು ಗ್ರಾಮದ ನಿವಾಸಿಗಳಾದ ಶ್ರೀ ರಮೇಶ್ ಪೂಜಾರಿ ಹಾಗೂ ಶ್ರೀ ರಾಜ್ ಕುಮಾರ್ ಶೆಟ್ಟಿಯವರುಗಳು ಮಾನ್ಯ ಉಪಲೋಕಾಯುಕ್ತರವರಿಗೆ ದೂರು ನೀಡಿ ಸದರಿ ಸುಭಾಷ್ ಚಂದ್ರ ಹೆಗ್ಗಡೆ ಹಾಗೂ ಅವರ ಪತ್ನಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಕೋರಿರುತ್ತಾರೆ. ಅದರಂತೆ, ಸದರಿ ದಂಪತಿಗಳ ವಿರುದ್ಧ ಎಫ್ಐಆರ್ ಅನ್ನು ಸಲ್ಲಿಸಲಾಗಿರುತ್ತದೆ. ಈ ಎಲ್ಲ ಅಂಶಗಳು ಪಂಚಾಯತಿಯ ಗಮನಕ್ಕೂ ಇದ್ದರೂ ಸಹ, ಎದುರುದಾರರುಗಳು ಮಧ್ಯದ ಉದ್ದಿಮೆಯ ರದ್ದಾಗಿದ್ದ ಪರವಾನಗಿಯನ್ನು ಪುನ: ಊರ್ಜಿತಗೊಳಿಸಲು ಸಾಮಾನ್ಯ ಸಭೆಯಲ್ಲಿ ಠರಾವು ಪಾಸ್ ಮಾಡಲು ಕ್ರಮ

ಜರುಗಿಸಿ ಅದರಂತೆ ಠರಾವನ್ನು ಪಾಸ್ ಮಾಡಲಾಗಿರುತ್ತದೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರುಗಳ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ 2015-16ರ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಹಿಂದಿನ ಆಡಳಿತ ಪಕ್ಷ ಅಧಿಕಾರವನ್ನು ಕಳೆದುಕೊಂಡಿದ್ದು, ಹೊಸ ಚುನಾಯಿತ ಜನಪ್ರತಿನಿದಿಗಳು ಆಯ್ಕೆಯಾಗಿದ್ದು, ಗ್ರಾಮದ ಅಭಿವೃದ್ದಿ ಹಿತದೃಷ್ಟಿಯಿಂದ ತಾವು ಅಧಿಕಾರ ವಹಿಸಿಕೊಂಡ ನಂತರ ಒಳ್ಳೆ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದೇವೆಂದು, ದಿ:09/07/2015ರ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆಯವರು 2014ರ ಕಾನೂನುಬಾಹಿರ ನಿರ್ಣಯದ ವಿರುದ್ದ ನ್ಯಾಯ ಒದಗಿಸಿಕೊಡಬೇಕೆಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಬಹುಮತ ಸದಸ್ಯರ ಅಭಿಪ್ರಾಯದಂತೆ ಸಾಮಾಜಿಕ ನ್ಯಾಯಕ್ಕೆ ಸರಿಯಾಗಿ ಪಂಚಾಯತ್‌ರಾಜ್ ಅಧಿನಿಯಮ 93 ರಂತೆ ಕಾನೂನುಬದ್ದವಾಗಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ. ರಾಜಕೀಯ ಪಕ್ಷದ ದೂರುದಾರರಾದ ಶ್ರೀ ಶೇಖರ್ ಕಲ್ಪಂಡೆ ರವರು ತನ್ನ ಹಾಗೂ ಮಾಜಿ ಅಧ್ಯಕ್ಷರ ವಿರುದ್ದ ಸುಳ್ಳು ದೂರನ್ನು ನೀಡಿರುತ್ತಾರೆ. ಸಾಮಾನ್ಯ ಸಭೆಯಲ್ಲಿ ಯಾವುದೇ ಕಾನೂನುಬಾಹಿರ ನಿರ್ಣಯವನ್ನು ಕೈಗೊಂಡಿರುವುದಿಲ್ಲ. ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಮತ್ತು ಶ್ರೀಮತಿ ಸರಿತಾ ಹೆಗ್ಗಡೆಯವರ ಯಾವುದೇ ಡೋರ್ ನಂಬರ್ ಹಾಗೂ ಲೈಸೆನ್ಸ್ ರದ್ದಾಗಿರುವುದಿಲ್ಲ. ಹಿಂದಿನ ವಿಶೇಷ ಸಭೆಯ ನಿರ್ಣಯ ಕಾನೂನುಬಾಹಿರವಾಗಿದ್ದು, ಸಹಜ ನ್ಯಾಯಕ್ಕೆ ವಿರೋದವಾದ ನಿರ್ಣಯವೆಂದು ಬಹುಮತದಿಂದ ನಿರ್ಣಯಿಸಲಾಗಿರುತ್ತದೆ. 2014ನೇ ಇಸವಿಯ ಹಿಂದಿನ ಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗುವುದೆಂದು ಮತ್ತು 2014 ವಿಶೇಷ ಸಭೆಯ ನಿರ್ಣಯವನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರ ನ್ಯಾಯಾಲಯದಲ್ಲಿ ಹಿಂದಿನ ಅಧ್ಯಕ್ಷರು ಮೇಲ್ಮನವಿಯನ್ನು ಸಲ್ಲಿಸಿದ್ದು, ಅದನ್ನು ವಾಪಸ್ಸು ಪಡೆಯಬೇಕೆಂದು ತೀರ್ಮಾನಿಸಲಾಗಿರುತ್ತದೆ. ಯಾವುದೇ ಘನ ನ್ಯಾಯಾಲಯಕ್ಕೆ ಅಗೌರವ ತೋರುವ ನಿರ್ಣಯ ಕೈಗೊಂಡಿರುವುದಿಲ್ಲ. ಈ ಹಿಂದೆ ಶ್ರೀ ರಾಜ್ ಕುಮಾರ್ ಶೆಟ್ಟಿ ಮತ್ತು ಶ್ರೀ ರಮೇಶ್ ಪೂಜಾರಿಯವರು 1ನೇ ಎದುರುದಾರರನ್ನು ಸೇರಿಸಿ 9 ಜನರ ಮೇಲೆ ನೀಡಿದ ದೂರಿಗೆ ದಿ:17/11/2014 ರಂದು ಉತ್ತರ ನೀಡಲಾಗಿರುತ್ತದೆ ಮತ್ತು ದೂರಿನಲ್ಲಿ ತಿಳಿಸಿದಂತೆ ಯಾವುದೇ ಅಕ್ರಮವನ್ನು ಎಸಗಿರುವುದಿಲ್ಲ. ಸರ್ವಾಧಿಕಾರ ದೋರಣೆ ತೋರಿಸಿರುವುದಿಲ್ಲ. ಲಾಭ ಮಾಡುವ ಉದ್ದೇಶವಿರಲಿಲ್ಲ.

ಗ್ರಾಮದ ಅಭಿವೃದ್ಧಿ ಹಿತದೃಷ್ಟಿಯಿಂದ ಸಾಮಾನ್ಯ ಸಭೆಯಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಂಡಿರುತ್ತೇವೆ. ದುರುದ್ದೇಶದಿಂದ ದೂರುದಾರರು ತನ್ನ ಮೇಲೆ ಸುಳ್ಳು ಆಪಾದನೆ ಮಾಡಿರುತ್ತಾರೆ ಹಾಗೂ ಇದು ರಾಜಕೀಯ ಪ್ರೇರಿತವಾಗಿರುತ್ತದೆ. ತನ್ನ ಅವಧಿಯಲ್ಲಿ ಹಾಗೂ ಅಧ್ಯಕ್ಷರ ಅವಧಿಯಲ್ಲಿ ಯಾವುದೇ ರೀತಿಯ ಕರ್ತವ್ಯಲೋಪವೆಸಗಿಲ್ಲವೆಂದು ತಿಳಿಸಿರುತ್ತಾರೆ.

3. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ:23/09/2016 ರ ಸಾಮಾನ್ಯ ಸಭೆಯಲ್ಲಿ ಕಟ್ಟಡ ಲೈಸೆನ್ಸ್ ಕೋರಿ ಬಂದ ಅರ್ಜಿಯ ಬಗ್ಗೆ ಚರ್ಚೆ ಕೈಗೆತ್ತಿಕೊಂಡು ಶ್ರೀ ಸುಭಾಷ್ ಚಂದ್ರ ಹೆಗ್ಗಡೆಯವರು ಕಟ್ಟಡ ಕಟ್ಟಲು ನೀಡಿದ ಅರ್ಜಿಯನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಲೈಸೆನ್ಸ್ ನೀಡುವ ಬಗ್ಗೆ ಚರ್ಚಿಸಲಾಯಿತು. ಸಾಮಾನ್ಯ ಸಭೆಯ ನಿರ್ಣಯದಂತೆ ಅರ್ಜಿದಾರರಿಗೆ ಕಾನೂನು ಬದ್ಧವಾಗಿ ಕಟ್ಟಡ ನಿರ್ಮಿಸಲು ಲೈಸೆನ್ಸ್ ನೀಡಲಾಯಿತು ಹಾಗೂ ಕಟ್ಟಡ ನಂಬರ್ ನೀಡಿ ತೆರಿಗೆ ವಿಧಿಸಲಾಯಿತು. ಇದನ್ನು ಪ್ರಶ್ನಿಸಿ ಶಂಕರ್ ಶೆಟ್ಟಿ ಹಾಗೂ ಇಬ್ಬರು ಉಡುಪಿ ಸಿವಿಲ್ ನ್ಯಾಯಾಲಯದಲ್ಲಿ, ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ, ಗ್ರಾಮ ಪಂಚಾಯತಿ ಮತ್ತು ಸುಭಾಷ್ ಚಂದ್ರ ಹೆಗ್ಗಡೆಯವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಪ್ರಕರಣ ದಾಖಲು ಮಾಡಿದ್ದು, ನ್ಯಾಯಾಲಯದ ತೀರ್ಪು ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಹಾಗೂ ಗ್ರಾಮ ಪಂಚಾಯತಿ ಪರವಾಗಿ ಆಗಿರುತ್ತದೆ. ಆಗಿನ ಅಧ್ಯಕ್ಷರಾದ ಶ್ರೀ ಶಿವರಾಮ್ ಶೆಟ್ಟಿ ಯವರು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಅವರ ಮುಖಂಡರನ್ನು ತೃಪ್ತಿ ಪಡಿಸಲು ದಿ:06/07/2014 ರಂದು ಗ್ರಾಮ ಪಂಚಾಯತಿಯ ವಿಶೇಷ ಸಭೆ ಕರೆದು ವಿಚಾರಣೆ ಬಾಕಿ ಇದ್ದರೂ ಕೂಡ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರ ಲೈಸನ್ಸ್ ರದ್ದು ಮಾಡಲು ನಿರ್ಣಯ ಕೈಗೊಂಡಿರುತ್ತಾರೆ. ಇದಕ್ಕೆ ಪಂಚಾಯತಿ ಅಭಿವೃದ್ದಿ ಅಧಿಕಾರಿಯವರು ವಿರೋದ ವ್ಯಕ್ತಪಡಿಸಿದರು ಕೂಡ ಬಲಾತ್ಕಾರವಾಗಿ ನಿರ್ಣಯ ಪುಸ್ತಕಕ್ಕೆ ಸಹಿ ಮಾಡಿ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತಾರೆ. ಸದರಿ ನಿರ್ಣಯದ ವಿರುದ್ದ ಪಂಚಾಯತಿ ಅಭಿವೃದ್ದಿ ಅಧಿಕಾರಿಯವರು ಷರಾ ಬರೆದು ಕಾನೂನುಬಾಹಿರ ನಿರ್ಣಯದ ಬಗ್ಗೆ ಸೂಕ್ತ ನಿರ್ದೇಶನ ನೀಡುವಂತೆ ಪತ್ರದ ಮುಖೇನ ಕೋರಿದ್ದು ಹಾಗೂ ಅದೇ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಸುಭಾಷ ಚಂದ್ರ ಹೆಗ್ಗಡೆ ಯವರು ಕಾನೂನುಬಾಹಿರ ನಿರ್ಣಯದ ಮೇಲೆ ತಾಲ್ಲೂಕು ಪಂಚಾಯತಿ ನ್ಯಾಯಾಲಯದಲ್ಲಿ ಮೇಲ್ಮನವಿ ಮಾಡಿದ್ದು, ಸದರಿ ತಾಲ್ಲೂಕು ಪಂಚಾಯತಿ ನ್ಯಾಯಾಲಯವು ಕಾನೂನುಬಾಹಿರ ನಿರ್ಣಯವನ್ನು ಅಮಾನತ್ತುಗೊಳಿಸಿ ಆದೇಶಿಸಿರುತ್ತದೆ.

4. 2015–16ರ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಹಿಂದಿನ ಆಡಳಿತ ಪಕ್ಷ ಅಧಿಕಾರ ಕಳೆದುಕೊಂಡಿದ್ದು, ಹೊಸ ಅಧ್ಯಕ್ಷರು ಶ್ರೀಮತಿ ಶಾಂಭವಿ ಕುಲಾಲ್ ಹಾಗೂ ಉಪಾಧ್ಯಕ್ಷರಾದ ಶ್ರೀ ಸುರೇಶ್ ಶೇರ್ವೆಗಾರ್‌ರವರು ಒಳ್ಳೆಯ ಗ್ರಾಮದ ಅಭಿವೃದ್ದಿ ಪರ ಕೆಲಸ ಮಾಡಿಕೊಂಡು ಬರುತ್ತಿದ್ದು,

ದಿ: 09/07/2015 ರಂದು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ರವರು ಕಾನೂನುಬಾಹಿರವಾಗಿ ನಿರ್ಣಯ ತೆಗೆದುಕೊಂಡಿದ್ದನ್ನು ಪ್ರಶ್ನಿಸಿ ತನಗೆ ನ್ಯಾಯ ಒದಗಿಸಿಕೊಡಬೇಕೆಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಸಾಮಾನ್ಯ ಸಭೆಯಲ್ಲಿ ಮಂಡಿಸಿ ಬಹುಮತ ಸದಸ್ಯರ ಅಭಿಪ್ರಾಯದಂತೆ ಸಾಮಾಜಿಕ ನ್ಯಾಯದ ನಿಟ್ಟಿನಲ್ಲಿ ಕಾನೂನುಬದ್ಧವಾಗಿ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ. ದೂರುದಾರರು ರಾಜಕೀಯ ಪಕ್ಷದ ಕಾರ್ಯಕರ್ತರಾಗಿ ಅಧ್ಯಕ್ಷರು ಹಾಗೂ ತನ್ನ ವಿರುದ್ಧ ಈ ದೂರನ್ನು ನೀಡಿರುತ್ತಾರೆ. ದಿ:09/07/2015 ರಂದು ಜರುಗಿದ ಸಾಮಾನ್ಯ ಸಭೆಯಲ್ಲಿ ಯಾವುದೇ ಕಾನೂನುಬಾಹಿರ ನಿರ್ಣಯವನ್ನು ಕೈಗೊಂಡಿರುವುದಿಲ್ಲ. ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಹಾಗೂ ಶ್ರೀಮತಿ ಸರಿತಾ ಹೆಗ್ಗಡೆಯವರಿಗೆ ಡೋರ್ ನಂಬರ್ ಹಾಗೂ ಲೈಸನ್ಸ್ ರದ್ದಾಗಿರುವುದಿಲ್ಲ. 2014ರ ಹಿಂದಿನ ಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗುವುದೆಂದು ಮತ್ತು 2014ರ ವಿಶೇಷ ಸಭೆಯ ನಿರ್ಣಯವು ಜಿಲ್ಲಾ ಪಂಚಾಯತ್ ಅಧ್ಯಕ್ಷರ ನ್ಯಾಯಾಲಯದಲ್ಲಿ ಹಿಂದಿನ ಅಧ್ಯಕ್ಷರು ಮೇಲ್ಮನವಿಯನ್ನು ಸಲ್ಲಿಸಿದ್ದು, ಅದನ್ನು ವಾಪಸ್ಸು ಪಡೆಯುವುದೆಂದು ನಿರ್ಣಯವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

5. ಎದುರುದಾರರು ಸಲ್ಲಿಸಿದ ಆಕ್ಷೇಪಣೆ ಮೇರೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

6. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ದಿ:09/07/2015ರ ಪೆರ್ಡೂರು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ನಡುವಳಿಯ ಪ್ರತಿಯನ್ನು ಹಾಜರುಪಡಿಸಿದ್ದು, ಅದರಲ್ಲಿ ನಿರ್ಣಯ ಸಂಖ್ಯೆ: 17 ರಲ್ಲಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ತಂದೆ ಶಿವಪ್ಪ ಹೆಗ್ಗಡೆ ಇವರು ಸಲ್ಲಿಸಿರುವ ಅರ್ಜಿಯ ಬಗ್ಗೆ ಚರ್ಚಿಸಲಾಗಿ ಪರ ವಿರೋಧ ವ್ಯಕ್ತವಾಗಿರುವುದರಿಂದ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ತಂದೆ ಶಿವಪ್ಪ ಹೆಗ್ಗಡೆ ಯವರ ಅರ್ಜಿಯು ಜಿಲ್ಲಾ ಪಂಚಾಯತಿಯಲ್ಲಿರುವ ಮೇಲ್ಮನವಿಯನ್ನು ಈಗಿನ ಆಡಳಿತ ಮಂಡಳಿಯವರು ಹಿಂಪಡೆಯುತ್ತಿರುವ ಬಗ್ಗೆ ತಾವುಗಳು ತೀವ್ರವಾದ ವಿರೋಧ ವ್ಯಕ್ತಪಡಿಸುತ್ತಾ, 2009 ರಿಂದ 2015 ರವರೆಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಇಲಾಖೆಗೆ ವಂಚಿಸಿರುವುದು ಸ್ಪಷ್ಟವಾಗಿ ಕಾಣಬಹುದಾಗಿದೆ. ಈ ಒಂದು ಪ್ರಕರಣವು ಕುಂದಾಪುರ ಸಹಾಯಕ ಕಮೀಷನರ್ ಮತ್ತು ಬ್ರಹ್ಮಾವರ ವಿಶೇಷ ತಹಶೀಲ್ದಾರ್ ರವರ ಆದೇಶದ ಮೇರೆಗೆ ಅಂದಿನ ಗ್ರಾಮ ಪಂಚಾಯತಿ ಅಧ್ಯಕ್ಷರು ಕ್ರಮ ಕೈಗಂಡು ಜಿಲ್ಲಾ ಪಂಚಾಯತಿಗೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಆದರೆ, ಈಗಿನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಶ್ರೀ ಸುಭಾಷ್ ಚಂದ್ರ ಹೆಗ್ಗಡೆಯವರ ಒತ್ತಡ ಹಾಗೂ ಆಮಿಶಕ್ಕೆ ಒಳಗಾಗಿ

ಕಾನೂನುಬಾಹಿರವಾಗಿ ರಾಜಕೀಯವಾಗಿ ಸರ್ವಾಧಿಕಾರಿಗಳಂತೆ ವರ್ತಿಸುತ್ತಾ, ಮೇಲ್ಮನವಿಯನ್ನು ಹಿಂಪಡೆಯುವ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಬಗ್ಗೆ ಸದಸ್ಯರುಗಳು ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಾ, ವಿಷಯವು ಉಚ್ಛ ನ್ಯಾಯಲಯದಲ್ಲಿ ಹಾಗೂ ಮಾನ್ಯ ಲೋಕಾಯುಕ್ತ ನ್ಯಾಯಾಲಯದಲ್ಲಿ ಇರುವುದರಿಂದ ಸಾಮಾನ್ಯ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವುದು ನ್ಯಾಯಾಂಗ ನಿಂದನೆಯಾಗುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಒಂದು ಆಡಳಿತ ಮಂಡಳಿಯು ಅಧಿಕಾರ ಸ್ವೀಕರಿಸಿದ ಒಂದು ವಾರದ ಒಳಗೆ ಕಾನೂನಿನ ವಿರುದ್ದವಾಗಿ ತಪ್ಪು ನಿರ್ಣಯವನ್ನು ಕೈಗೊಂಡಿದ್ದು, ರಾಜಕೀಯ ಉದ್ದೇಶದಿಂದ ಶ್ರೀ ಸುಭಾಷ್ ಚಂದ್ರ ಹೆಗ್ಗಡೆಯವರ ಲಾಭಕ್ಕಾಗಿ ಅವರ ಪರವಾಗಿ ತಪ್ಪು ನಿರ್ಣಯವನ್ನು ಕೈಗೊಂಡಿರುವುದು ಸ್ಪಷ್ಟವಾಗಿ ಕಾಣಬಹುದು. ಆದ್ದರಿಂದ, ತರಾತುರಿಯಲ್ಲಿ ಕೈಗೊಂಡ ನಿರ್ಣಯವು ಪಂಚಾಯತ್‌ರಾಜ್ ಕಾಯ್ದೆಯ ಉಲ್ಲಂಘನೆಯಾಗಿರುವುದು, ಆದ್ದರಿಂದ, ಮುಂದೆ ತೊಂದರೆ ಬಂದಾಗ ಆಡಳಿತ ಮಂಡಳಿಯವರು ಹೊಣೆಗಾರರಾಗಿರುತ್ತಾರೆ. ಆದ್ದರಿಂದ, ಆಡಳಿತ ಮಂಡಳಿಯ ಅಧ್ಯಕ್ಷರು ಜಿಲ್ಲಾ ಪಂಚಾಯತಿ ನ್ಯಾಯಾಲಯದಲ್ಲಿರುವ ಪ್ರಕರಣವನ್ನು ಹಿಂಪಡೆಯಲು ತೆಗೆದುಕೊಂಡಿರುವ ನಿರ್ಣಯವನ್ನು 12 ಜನ ವಿರೋಧ ವ್ಯಕ್ತಪಡಿಸಿರುವುದು ನಮೂದಾಗಿರುತ್ತದೆ. ಕಟ್ಟಡ ಕಟ್ಟಿದ ನಂತರ ತೆರಿಗೆಯನ್ನು ವಿದಿಸಲಾಗಿರುತ್ತದೆ. ಇದರ ಬಗ್ಗೆ ಉಡುಪಿ ಸಿವಿಲ್ ನ್ಯಾಯಾಲಯದಲ್ಲಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆರವರನ್ನು ಪ್ರತಿವಾದಿಗಳನ್ನಾಗಿ ಮಾಡಿ ಪ್ರಕರಣ ದಾಖಲಾಗಿದ್ದು, ಅದರ ಅಸಲು ದಾವೆ ಸಂಖ್ಯೆ: 392/2009ರಂತೆ ದಾಖಲಾಗಿದ್ದು, ದಿ:13/12/2012 ರಂದು ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರ ಪರವಾಗಿ ತೀರ್ಪಾಗಿರುತ್ತದೆ. ಇದನ್ನು ಪ್ರಶ್ನಿಸಿ ಉಡುಪಿಯ ಹೆಚ್ಚುವರಿ ಸಿವಿಲ್ ನ್ಯಾಯಲಯದಲ್ಲಿ ಮೇಲ್ಮನವಿಯನ್ನು ಆರ್‌ಎ ನಂಬರ್:17/2013 ಎಂದು ದಾಖಲಿಸಿದ್ದು, ಸದರಿ ಮೇಲ್ಮನವಿಯು ವಿಲೇಗೆ ಬಾಕಿ ಇರುತ್ತದೆ. ಈ ಬಗ್ಗೆ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರನ್ನು ಎದುರುದಾರರನ್ನಾಗಿ ಮಾಡಿ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಅರ್ಜಿಯನ್ನು ಸಲ್ಲಿಸಿದ್ದು ವಿ.ಪಿ ನಂಬರ್ 2190/2010 ರಂತೆ ಮಾನ್ಯ ಉಚ್ಛ ನ್ಯಾಯಾಲಯವು ಅಭಕಾರಿ ಜಿಲ್ಲಾಧಿಕಾರಿಯವರಿಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ತಿಳಿಸಿದ್ದು, ಈ ತೀರ್ಪು ಕೂಡ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರ ಪರವಾಗಿ ಆಗಿರುತ್ತದೆ. ಈ ತೀರ್ಪಿನ ವಿರುದ್ಧ ಸಹಾಯಕ ಕಮೀಷನರ್, ಕುಂದಾಪುರ ಇವರಲ್ಲಿ ದೂರು ನೀಡಿದ್ದು, ಸಹಾಯಕ ಆಯುಕ್ತರು, ಕುಂದಾಪುರ ಇವರು ಪ್ರಕರಣವನ್ನು ವಿಶೇಷ ತಹಶೀಲ್ದಾರ್‌ರವರಿಗೆ ತನಿಖೆ ನಡೆಸುವಂತೆ ತಿಳಿಸಿದು, ಅದರಂತೆ, ವಿಶೇಷ ತಹಶೀಲ್ದಾರ್‌ರವರು ತನಿಖೆ ನಡೆಸಿ ದಿ:27.06.2014 ರಂದು ಮ್ಯೂಟೇಷನ್ ಅನ್ನು ರದ್ದುಪಡಿಸಲು ಆದೇಶಿಸಿದ್ದು, ಇದರ ಬಗ್ಗೆ ಮೇಲ್ಮನವಿಯನ್ನು ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರು ಅರ್ಜಿಯನ್ನು ಸಲ್ಲಿಸಿ ಆರ್‌ಟಿಸಿ ಕಾಲಂ 11ರ ಋಣಗಳು ಎಂಬಲ್ಲಿ ಎಎಲ್‌ಎನ್ ಎಸ್‌ಆರ್ 54/97/98ಬಿ2 ಅನ್ನು ಲೋಪಪಡಿಸುವ ಬದಲು ಇದು ಭೂಪರಿವರ್ತನೆಯ ಆದೇಶವನ್ನು

ರದ್ದುಪಡಿಸಲಾಗಿದೆ. ಆದ್ದರಿಂದ, ಎಎಲ್ಎನ್ಎಸ್ಆರ್ 54/97/98ಬಿ2 ನಮೂದನ್ನು ಸರಿಪಡಿಸಿಕೊಡುವ ಬಗ್ಗೆ ಮನವಿ ಮಾಡಿಕೊಂಡಿದ್ದು, ಮನವಿಯನ್ನು ಪರಿಶೀಲಿಸಿ ವಿಶೇಷ ತಹಶೀಲ್ದಾರ್‌ರವರು ದಿ:24/06/2014 ರಂದು ತಿದ್ದುಪಡಿ ಆದೇಶ ಮಾಡಿರುತ್ತಾರೆ. ಹೀಗಿದ್ದರೂ 2014 ರಲ್ಲಿ ಆಗಿನ ಅಧ್ಯಕ್ಷರು ಯಾವುದೇ ಮೇಲಧಿಕಾರಿಗಳ ಆದೇಶವಿಲ್ಲದೇ ತಹಶೀಲ್ದಾರ್‌ರವರ ತಿದ್ದುಪಡಿ ಆದೇಶವನ್ನು ಲೆಕ್ಕಿಸದೇ ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು, ವಿಶೇಷ ತಹಶೀಲ್ದಾರ್ ರವರ ಆದೇಶ ಪ್ರತಿಯನ್ನು ಕೈಯಲ್ಲಿಡಿದು ವಿಶೇಷ ಸಭೆ ಕರೆದು ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರ ಲೈಸನ್ಸ್ ಹಾಗೂ ಡೋರ್ ನಂಬರ್ ಅನ್ನು ರದ್ದುಪಡಿಸುವ ನಿರ್ಣಯವನ್ನು ಕೈಗೊಂಡಿರುತ್ತಾರೆ. 2009 ರಿಂದಲೂ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರು ಕಟ್ಟಡಕ್ಕೆ ಸಲ್ಲತಕ್ಕ ತೆರಿಗೆಯನ್ನು ಕಟ್ಟುತ್ತ ಬಂದಿರುತ್ತಾರೆ. ಆದ್ದರಿಂದ, ಹಿಂದಿನ ಗ್ರಾಮ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯವು ಸರಿಯಲ್ಲವೆಂದು ತೀರ್ಮಾನಿಸಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಯವರ ಪರವಾಗಿ ತೀರ್ಮಾನಿಸಲಾಗಿರುತ್ತದೆ". ಸದರಿ ಠರಾವಿನ ಪ್ರತಿಯನ್ನು ಹಾಜರುಪಡಿಸಲಾಗಿದೆ.

7. ಸದರಿ ದೂರುದಾರರು ತಿಳಿಸಿರುವಂತೆ ಜೆಎಂಎಫ್‌ಸಿ ನ್ಯಾಯಾಲಯ ಉಡುಪಿಯಲ್ಲಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಮತ್ತು ಶ್ರೀಮತಿ ಸರಿತಾ ಹೆಗ್ಗಡೆ ಇವರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪೆರ್ಡೂರು ಗ್ರಾಮದ ಸರ್ವೆ ನಂ.127/36ರ ನಿವೇಶನದಲ್ಲಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ರವರ ನಿವೇಶನದ ಪೈಕಿ 0.10 ಎಕರೆ ಜಾಗವನ್ನು ವಾಸ್ತವ್ಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿರುವುದಾಗಿ ಹಾಗೂ ತಹಶೀಲ್ದಾರ್ ಕಛೇರಿಯ ಸೀಲು ಹಾಗೂ ಸಹಿ ಇರುವ ನಕಲಿ ದಾಖಲೆಗಳನ್ನು ಸೃಷ್ಟಿಸಿ ಗ್ರಾಮ ಪಂಚಾಯತಿಗೆ ಸಲ್ಲಿಸಿರುವ ಬಗ್ಗೆ ಮತ್ತು ಪಿಂಕಿ ವೈನ್ಸ್ ಹೆಸರಿನಲ್ಲಿ ಮಧ್ಯದಂಗಡಿಯ ಪರವಾನಗಿ ಪಡೆದಿರುವ ಬಗ್ಗೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿರುವುದು ಅವರು ಹಾಜರುಪಡಿಸಿರುವ ಎಫ್ಐಆರ್‌ನ ಪ್ರತಿಯಿಂದ ಕಂಡು ಬರುತ್ತದೆ. ಸದರಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ರವರ ಕಟ್ಟಡದ ಬಗ್ಗೆ ಅನೇಕ ತಕರಾರುಗಳು ಇದ್ದು, ಈ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹಾಗೂ ಕ್ರಿಮಿನಲ್ ಪ್ರಕರಣವು ಜೆಎಂಎಫ್‌ಸಿ ನ್ಯಾಯಾಲಯ ಉಡುಪಿಯಲ್ಲಿ ವಿಲೇಗೆ ಬಾಕಿ ಇರುವುದು ಎದುರುದಾರರ ಆಕ್ಷೇಪಣೆಯಿಂದ ಸ್ಪಷ್ಟ ಪಡುತ್ತದೆ ಹಾಗೂ ಹಾಜರುಪಡಿಸಿರುವ ಠರಾವಿನ ಪ್ರತಿಯಿಂದ ಸ್ಪಷ್ಟ ಪಡುತ್ತದೆ. ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ವಿಲೇಗೆ ಬಾಕಿ ಇರುವ ಹಿನ್ನೆಲೆಯಲ್ಲಿ ಎದುರುದಾರರುಗಳು ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಹಾಗೂ ಅವರ ಪತ್ನಿಯ ಪರವಾಗಿ ಠರಾವನ್ನು ಪಾಸು ಮಾಡಿರುವುದು ಸ್ಪಷ್ಟ ಪಡುತ್ತದೆ. ಇದು ಒಂದು ಪ್ರಕರಣವು ನ್ಯಾಯಾಲಯದಲ್ಲಿ ವಿಲೇಗೆ ಬಾಕಿ ಇರುವಾಗ ಕೈಗೊಂಡ ನಿರ್ಣಯದ ಪ್ರತಿಯಾಗಿರುತ್ತದೆ. ಇದು

ನ್ಯಾಯಯುತವಾಗಿರುವುದಿಲ್ಲ. ಆದ್ದರಿಂದ, ಎದುರುದಾರರುಗಳು ಕರ್ತವ್ಯಲೋಪವೆಸಗಿರುವುದು ಸ್ಪಷ್ಟ ಪಡುತ್ತದೆ. ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಮತ್ತು ಶ್ರೀಮತಿ ಸರಿತಾ ಹೆಗ್ಗಡೆಯವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವಂತ ಘೋರ ಪ್ರಕರಣ ವಿಲೇಗೆ ಬಾಕಿ ಇರುವ ಬಗ್ಗೆ ಗ್ರಾಮ ಪಂಚಾಯತಿ ಸಭೆಯಲ್ಲಿ ಎಲ್ಲರ ಗಮನಕ್ಕೂ ತಂದಿದ್ದರೂ ಸಹ ಹಾಗೂ ನ್ಯಾಯಾಲಯದಲ್ಲಿ ಸಿವಿಲ್ ಪ್ರಕರಣವು ವಿಲೇಗೆ ಬಾಕಿ ಇರುವಾಗ ಎದುರುದಾರರುಗಳು ನಿರ್ಣಯವನ್ನು ಕೈಗೊಂಡಿರುವುದು ನ್ಯಾಯಸಮ್ಮತವಲ್ಲವೆಂದು ಕಂಡು ಬರುತ್ತದೆ.

8. **1ನೇ ಎದುರುದಾರರಾದ ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಮತ್ತು 2ನೇ ಎದುರುದಾರರಾದ ಶ್ರೀ ಸುರೇಶ್ ಸೇರ್ವೆಗಾರ್, ಮಾಜಿ ಅಧ್ಯಕ್ಷರು, ಹಾಲಿ ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ** ಇವರುಗಳು ಸಾರ್ವಜನಿಕ ನೌಕರರು/ಚುನಾಯಿತ ಪ್ರತಿನಿಧಿಗಳಾಗಿರುವುದರಿಂದ, ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆಯಡಿ ಕ್ರಮವನ್ನು ಜರುಗಿಸಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

08/2/17